ಓ.ಎಸ್ಃ 364-2008

ಡಿ. ಡಬ್ಲ್ಯೂ ಃ 11

**<u>ಸಾಕ್ಷಿಗೆ ದಿನಾಂಕ 13.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ನನಗೆ ವಾದಿ ಹಾಗೂ 1 ರಿಂದ 7, ಹಾಗೂ ಅವರ ಕುಟುಂಬದ ಪರಿಚಯವಿರುತ್ತದೆ. 6 ನೇ ಪ್ರತಿವಾದಿಯಿಂದ ನನ್ನ ತಂದೆ ಕ್ರಯಕ್ಕೆ ಪಡೆದುಕೊಂಡ ವಿಚಾರಗಳು ನನಗೆ ಗೊತ್ತು . ನನ್ನ ತಂದೆ ಸ್ವತ್ತನ್ನು ಖರೀದಿಸುವಾ ನನಗೆ 18 ವರ್ಷ ವಯಸ್ಸಾಗಿತ್ತು . ಸ್ವತ್ತನ್ನು ಖರೀದಿಸುವಾಗ ಸದರಿ ಕ್ರಯ ಪತ್ರಕ್ಕೆ ನಾನು ಹಾಜರಿದ್ದೆನು. 6 ನೇ ಪ್ರತಿವಾದಿಯು ತಮ್ಮ ಮನೆಯ ನಿರ್ಮಾಣದ ಖರ್ಚಿಗಾಗಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. 6 ನೇ ಪ್ರತಿವಾದಿ 2006 ರಲ್ಲಿ ಮನೆಯನ್ನು ಕಟ್ಟಿರುತ್ತಾರೆ. 6 ನೇ ಪ್ರತಿವಾದಿ ಮನೆಯನ್ನು ಕಟ್ಟಿದ ಬಗ್ಗೆ ನಾನು ಪಂಚಾಯಿತಿ ದಾಖಲೆಗಳನ್ನು ನೋಡಿಲ್ಲ. ಮನೆ ಕಟ್ಟಲು ಯಾರ ಬಳಿ ಸಾಲ ಮಾಡಿದ್ದರು ಎಂದು ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಪರಿಶೀಲನೆ ಮಾಡಿಲ್ಲ. 6 ನೇ ಪ್ರತಿವಾದಿ ಸ್ವತ್ತನ್ನು ಮನೆಯ ನಿರ್ಮಾಣದ ಖರ್ಚಿಗಾಗಿ ಮಾಡಿದ ಸಾಲ ತೀರಿಸಲು ಮಾರಾಟ ಮಾಡಿರುತ್ತಾರೆ ಎಂಬ ವಿಚಾರವನ್ನು ಕ್ರಯ ಪತ್ರದಲ್ಲಿ ಬರೆದಿಲ್ಲ. 6 ನೇ ಪ್ರತಿವಾದಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂಬ ವಿಚಾರ ನಾನು ತಿಳಿದುಕೊಂಡಿದ್ದೆನು. ನಾನು ಖರೀದಿಸಿರುವ ಸ್ವತ್ತಿನಲ್ಲಿ ವಾದಿಗೂ ಸಹಾ ಹಕ್ಕು ಇತ್ತು ಎಂಬ ವಿಚಾರ ನನಗೆ ಗೊತ್ತಿತ್ತು . ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಹಾಗೂ ನನ್ನ ತಂದೆ 6 ನೇಪ್ರತಿವಾದಿಯೊಂದಿಗೆ ಶರೀಕಾಗಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸ್ವತ್ತನ್ನು ಖರೀದಿಸಿರುತ್ತೇವೆ

ಎಂದರೆ ಸರಿಯಲಲ. ಸಾಕ್ಷಿಯು ಮುಂದುವರೆದು ವಾದಿಗೆ ತಮ್ಮ ಕುಟುಂಬದಲ್ಲಿ ನಿವೇಶನವನ್ನು ನೀಡಲಾಗಿತ್ತು ಎಂದು ನುಡಿಯುತ್ತಾರೆ. ವಾದಿಗೆ ಯಾವ ನಿವೇಶನವನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ